ಮೈಸೂರ ಗೆಜೆಟ್ಟ.

ಸಂ. 39.] ಸರ್ಕಾರದಿಂದ ಪ್ರಸಿದ್ಧ [ನಂ. 6.

ಬೆಂಗಳೂರು, ಗುರುವಾರ, ಫೆಬ್ರವರಿ ತಾ|| 11, ಸ್ರ 1904.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮುಂತಾದವರಿಂದ ಕೊಡೋಣ್ಣಾದ ಇಸ್ತಿಹಾರ್‌ನ್ನಾಮೆಗಳು.

ವಿದ್ಯಾಭ್ಯಾಸ ಇಲಾಖೆ.

ಪ್ರಕಟನೆ ಪತ್ರಿಕೆ, ಡಿ. ನಂಬರು 27, ಸ್ರ 1904ನೆಯ ಇಸವಿ ಜನವರಿ ತಾರೀಖು 9.

ಕನ್ನಡ ಪಂಡಿತ ಪರೀಕ್ಷೆ.

ಹೊಸದಾಗಿ ತಿದ್ದುಪಾಟು ಮಾಡಿದ ಮೈಸೂರು ಕನ್ನಡ ಪಂಡಿತ ಪರೀಕ್ಷೆಯ ನಿಬಂಧನೆಗಳು ಜನಗಳ ತಿಳುವಳಿಕೆಯ ಬಗ್ಗೆ ಈ ಕೆಳಗೆ ಪ್ರಕಟಿಸಲ್ಪಟ್ಟವೆ.

1. ಕನ್ನಡ ಪಂಡಿತ ಪರೀಕ್ಷೆಯು ಮೈಸೂರಿನಲ್ಲಿ ಪ್ರತಿ ವರ್ಷವೂ ನವಂಬರು ತಿಂಗಳು 15ನೆಯ ತಾರೀಖಿನಲ್ಲಿ ಅಥವಾ ಆ ದಿವಸ ಭಾನುವಾರವಾದ ಪಕ್ಷದಲ್ಲಿ ನವಂಬರು 16ನೆಯ ತಾರೀಖಿನಲ್ಲಿ ಆರಂಭವಾಗಿ ಆ ದಿವಸದಲ್ಲಿಯೂ ಮುಂದಿನ ದಿವಸಗಳಲ್ಲಿಯೂ ನಡೆಯಿಸಲ್ಪಡುವುದು.

2. ಈ ಪರೀಕ್ಷೆಗೆ ಇದರಡಿ ವಿವರಿಸಲ್ಪಟ್ಟಿರುವವರು ಸೇರಬಹುದು:—

(a) "ದೇಶೀಯೋಪಾಧ್ಯಾಯ" ಪರೀಕ್ಷೆ, "ಅಪ್ಪರ್ ಸೆಕಂಡರಿ" ಪರೀಕ್ಷೆ, "ಮದ್ರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್" ಪರೀಕ್ಷೆ, ಇವುಗಳಲ್ಲಿ ಯಾವುದಾದರೂ ಬಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು. ಈ ಪರೀಕ್ಷೆಯಾದ ಕಾಲಕ್ಕೂ ಇವರು ಹೋಗಬೇಕೆಂದು ಅಪೇಕ್ಷಿಸುವ ಪಂಡಿತ ಪರೀಕ್ಷೆ ನಡೆಯುವ ಕಾಲಕ್ಕೂ ಕನಿಷ್ಠ ಪಕ್ಷ ಎರಡು ವರ್ಷ ಅಂತರವಿರಬೇಕು. (b) ಲೋವರ್ ಸೆಕಂಡರೀ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಪರೀಕ್ಷ್ಯೆಯರು (Female candidates). ಈ ಪರೀಕ್ಷೆಯಾದ ಕಾಲಕ್ಕೂ ಇವರು ಹೋಗಬೇಕೆಂದು ಅಪೇಕ್ಷಿಸುವ ಪಂಡಿತ ಪರೀಕ್ಷೆಯು ನಡೆಯುವ ಕಾಲಕ್ಕೂ ಕನಿಷ್ಠ ಪಕ್ಷ ನಾಲ್ಕು ವರ್ಷ ಅಂತರವಿರಬೇಕು.

[ಟಿಪ್ಪಣಿ] ವಿದ್ಯಾರ್ಥಿನಿಯರ ವಿಷಯದಲ್ಲಿ, ವಿಶೇಷ ಸಂದರ್ಭಗಳಲ್ಲಿ ಮಾತ್ರ, ಪರೀಕ್ಷ್ಯೆಯರನ್ನು ಲೋವರ್ ಸೆಕಂಡರೀ ಪರೀಕ್ಷೆ ಮಾಡಿರಬೇಕೆಂಬ ನಿರ್ಬಂಧವಿಲ್ಲದೆಯೇ, ಪಂಡಿತ ಪರೀಕ್ಷೆಗೆ ಕೇರಿಸಿಕೊಳ್ಳುವ ಅಂಶದಲ್ಲಿ ದೇಶೀಯ ಪರೀಕ್ಷಾ ನಿರ್ವಾಹಕ ಸಭೆಯವರು ಯೋಚಿಸಲು ಸಿದ್ಧರಾಗಿರುತ್ತಾರೆ.

3. ಈ ಪರೀಕ್ಷೆಗೆ ಸೇರಬೇಕೆಂಬುವರು ಬೆಂಗಳೂರಲ್ಲಿರುವ ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ, ಆಗಸ್ಟು 15ನೆಯ ತಾರೀಖನ್ನು ಅತಿಕ್ರಮಿಸದೇ ತಲಪುವಂತೆ ದರಖಾಸ್ತುಗಳನ್ನು ಬರೆದುಕೊಳ್ಳಬೇಕು. ಈ ಪರೀಕ್ಷೆಗೆ ಕೇರುವ ಪ್ರತಿ ಒಬ್ಬರೂ (Candidate) ತಮಗೆ ದೇಶೀಯೋಪಾಧ್ಯಾಯ ಪರೀಕ್ಷೆ, ಅಪ್ಪರ್ ಸೆಕಂಡರಿ ಪರೀಕ್ಷೆ, ಮದ್ರಾಸ್ ಯೂನಿವರ್ಸಿಟಿಯ ಮೆಟ್ರಿಕ್ಯುಲೇಶನ್ ಪರೀಕ್ಷೆ, ಇವುಗಳಲ್ಲಿ ಯಾವುದಾದರೂ ಒಂದು ಆಗಿರುವ ಬಗ್ಗೆ ಕೊಟ್ಟಿರುವ ನಿರ್ಣಯ ಪತ್ರಿಕೆ (ಸರಟಿಫಿಕೇಟು) ಯನ್ನೂ ದರಖಾಸ್ತಿನ ಜೊತೆಯಲ್ಲಿ ಕಳುಹಿಸಬೇಕು. ಪರೀಕ್ಷ್ಯರು ತಮಗೆ ಲೋವರ್ ಸೆಕಂಡರೀ ಪರೀಕ್ಷೆಯಾಗಿರುವ ಅಂಕವನ್ನು ತೋರಿಸುವ ನಿರ್ಣಯ ಪತ್ರಿಕೆಯನ್ನು ದರಖಾಸ್ತಿನ ಜೊತೆಯಲ್ಲಿ ಕಳುಹಿಸಬೇಕು.

4. ಈ ಪರೀಕ್ಷೆಗೆ ಸೇರಿಸಿಕೊಳ್ಳುವುದಕ್ಕಾಗಿ ಕೊಡತಕ್ಕ ವೇತನ ರೂಪಾಯಿಗಳು 5.

5. ಪರೀಕ್ಷ್ಯರು ಕೆಳಗೆ ಹೇಳುವ ವಿಷಯಗಳಲ್ಲಿ ಪರೀಕ್ಷಿಸಲ್ಪಡುವರು :—

I. ಕನ್ನಡ ಭಾಷೆ ಮತ್ತು ಸಾಹಿತ್ಯ.

(a) ಕನ್ನಡ ವ್ಯಾಕರಣ—

ಕಬ್ದಮಣಿದರ್ಪಣ, ಎಲ್ಲಾ	ಒಂದು ಪತ್ರಿಕೆ ಅಂಕಗಳು (Marks) 120.
ಕಬ್ದಾನುಶಾಸನ, ಎಲ್ಲಾ. ವ್ಯಾಖ್ಯಾನವಿಲ್ಲ ..	
ರಘುನಾಥರಾಯರ ವ್ಯಾಕರಣೋಪನ್ಯಾಸ ಮಂಜರಿ, ಎಲ್ಲಾ	

(b) ಕನ್ನಡ ಛಂದಸ್ಸು ಮತ್ತು ಅಲಂಕಾರ—

(1)	ನಾಗವರ್ಮನ ಛಂದಸ್ಸು	ಅದೇ ... 80
(2)	ನಾಗವರ್ಮನ ಕಾವ್ಯಾವಲೋಕನ	
(3)	ಶೃಂಗಾರ ರತ್ನಾಕರ	

(c) ಕನ್ನಡ ಪ್ರಬಂಧರಚನೆ—

ಪರೀಕ್ಷಕರಿಂದ ನಿಯಮಿತವಾದ ಎರಡು ವಿಷಯಗಳೊಳಗೆ ಯಾವುದಾದರೂ ಒಂದನ್ನು ಕುರಿತು ಒಂದು ಉಪನ್ಯಾಸ	ಅದೇ .. 100

(d) ಕೆಳಗೆ ಹೇಳುವ ಗ್ರಂಥಗಳು—

(1)	ಚಂದ್ರಪ್ರಭ ಪುರಾಣ, ಆಶ್ವಾಸಗಳು Iನೆಯ ಭಾಗ ..	ಅದೇ .. 100
	ಜೈಮಿನಿ ಭಾರತ, ಸಂಧಿಗಳು 17—24	
(2)	ಪಂಪಭಾರತ, ಆಶ್ವಾಸಗಳು 2—7	ಅಂಕಗಳು (Marks) ಒಂದು ಪತ್ರಿಕೆ 100
	ಜಗನ್ನಾಥ ವಿಜಯ, ಆಶ್ವಾಸಗಳು 7—10	
(3)	ರಾಮಾಶ್ವಮೇಧ, ಪೂರ್ತಿಯಾಗಿ.	ಅದೇ .. 100
	ಚಿಕ್ಕದೇವರಾಜ ವಿಜಯ, ಆಶ್ವಾಸಗಳು 1—4	
(4)	ಗಿರಿಜಾ ಕಲ್ಯಾಣ, ಆಶ್ವಾಸಗಳು 5—10	
	ಮಿತ್ರವಿಂದಾ ಗೋವಿಂದ, ಪೂರ್ತಿಯಾಗಿ	ಅದೇ ... 100
	ಕೂರಸೇನಚರಿತ್ರ, ಬಸವಪ್ಪಶಾಸ್ತ್ರಿಗಳಿಂದ ರಚಿಸಲ್ಪಟ್ಟಿದ್ದು ಪೂರ್ತಿಯಾಗಿ	

II. ಸಂಸ್ಕೃತ ಭಾಷೆ ಮತ್ತು ಸಾಹಿತ್ಯ.

(a) ಸಂಸ್ಕೃತ ವ್ಯಾಕರಣ—

ಲಘು ಕೌಮುದಿ	ಅದೇ ... 80

(b) ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ—

ಕೃತಬೋಧ	ಅದೇ ... 120
ಸಾಹಿತ್ಯದರ್ಪಣ, (10ನೆಯ ಪರಿಚ್ಛೇದ ವಿನಾ)	
ಕುವಲಯಾನಂದ	

(c) ಕೆಳಗೆ ಹೇಳುವ ಗ್ರಂಥಗಳು—

	ಹಂಸಸಂದೇಶ	
	ನೈಷಧ, 12 ಮತ್ತು 13ನೆಯ ಸರ್ಗಗಳು ...	ಅದೇ .. 100
	ಮಾಲತೀಮಾಧವ	
	ಶ್ರೀಹರ್ಷಚರಿತ, ಉಚ್ಛ್ವಾಸಗಳು 1—3	ಅದೇ .. 100

III. ಭಾಷಾಂತರಕರಣ.

ಕನ್ನಡದಿಂದ ಸಂಸ್ಕೃತಕ್ಕೆ 60 ಅಂಕಗಳು ..	ಅದೇ .. 100
ಸಂಸ್ಕೃತದಿಂದ ಕನ್ನಡಕ್ಕೆ 40 ಅಂಕಗಳು ..	

6. ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕಾಲ ವಿಷಯ ಕ್ರಮಾನುಸಾರವಾಗಿ ಪರೀಕ್ಷೆಯು ನಡೆಯುವುದು :—

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೆಯ ದಿನ ..	10—1	ಕನ್ನಡ ವ್ಯಾಕರಣ		
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ ...	120	200
ಎರಡನೆಯ ದಿನ ...	10—1	ಕನ್ನಡ ಗ್ರಂಥಗಳು ಮೊದಲನೆಯ ಪತ್ರಿಕೆ ...	80	
	2—5	ಅದೇ ಎರಡನೆಯ ಪತ್ರಿಕೆ ..	100	
ಮೂರನೆಯ ದಿನ ...	10—1	ಅದೇ ಮೂರನೆಯ ಪತ್ರಿಕೆ ..	100	400
	2—5	ಅದೇ ನಾಲ್ಕನೆಯ ಪತ್ರಿಕೆ ..	100	
ನಾಲ್ಕನೆಯ ದಿನ ..	10—1	ಕನ್ನಡ ಪ್ರಬಂಧರಚನೆ ...	100	
	2—5	ಭಾಷಾಂತರಕರಣ ..	100	
ಐದನೆಯ ದಿನ ..	10—1	ಸಂಸ್ಕೃತ ವ್ಯಾಕರಣ ...	100	
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ ...	80	200
ಆರನೆಯ ದಿನ ...	10—1	ಸಂಸ್ಕೃತ ಗ್ರಂಥಗಳು ಮೊದಲನೆಯ ಪತ್ರಿಕೆ ...	120	
	2—5	ಅದೇ ಎರಡನೆಯ ಪತ್ರಿಕೆ ..	100	200

7. ಪರೀಕ್ಷಾ ವಿಷಯಗಳ ಬಂದೊಂದು ಸಮುದಾಯದಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವರು.

ಪರೀಕ್ಷಾ ವಿಷಯಗಳು ಕೆಳಗೆ ಕಾಣಿಸಿರುವಂತೆ 6 ಸಮುದಾಯಗಳಾಗಿ ಮಾಡಲ್ಪಟ್ಟಿವೆ :—

(1) I *a* ಮತ್ತು *b*	(3) I *d*.	(5) II *c*.
(2) I *c*.	(4) II *a* ಮತ್ತು *b*.	(6) III.

ತೇರ್ಗಡೆಯಾದವರೊಳಗೆ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಿಮೆ ಇಲ್ಲದೆ ಅಂಕಗಳನ್ನು ಪಡೆದವರು ಲನೆಯ ವರ್ಗದಲ್ಲಿಯೂ, ಉಳಿದವರು ಎರಡನೆಯ ವರ್ಗದಲ್ಲಿಯೂ ಸೇರಿಸಲ್ಪಡುವರು.

8. ಕನ್ನಡ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ "ಅಪ್ಪರ್ ಸೆಕಂಡರಿ" ಅಂತಸ್ಥಿನ ಉಪಾಧ್ಯಾಯನಿರ್ಣಯ ಪತ್ರಿಕಾ ಪರೀಕ್ಷೆಯೂ ಕೂಡ ಆಗಿದ್ದ ಪಕ್ಷದಲ್ಲಿ, ಕಾಲೇಜುಗಳಲ್ಲಿಯೂ ಹೈ ಸ್ಕೂಲುಗಳಲ್ಲಿಯೂ ಕನ್ನಡ ಮುನಷಿಗಳ ಕೆಲಸವನ್ನೂ, ತಾಲ್ಲೂಕು ಕನ್ನಡ ಸ್ಕೂಲಿಗಳಲ್ಲಿ ಹೆಡ್ಮಾಸ್ಟರುಗಳ ಕೆಲಸವನ್ನೂ ಕೊಡುವಾಗ ಇತರ ದರಖಾಸ್ತುದಾರರಿಗಿಂತ ಇವರಿಗೆ ಹೆಚ್ಚು ಪ್ರಾಮುಖ್ಯವು ಕೊಡಲ್ಪಡುವುದು.

9. ಈ ಪ್ರಕಟನೆಯು ಸ್ರ 1905ನೆಯ ಇಸವಿ ನವಂಬರು ಪರೀಕ್ಷೆಯಿಂದ ಆಚರಣೆಯಲ್ಲಿ ತರಲ್ಪಡುತ್ತದೆ.

ಹಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಕೋಲಾರ ಡಿಸ್ಟ್ರಿಕ್ಟು.

ಇನ್ತಿಹಾರ್ನಾಮೆ.

ತಾರೀಖು 20ನೆ ಜನವರಿ 1904ನೆ ಇಸವಿ

ಮಾಲೂರು ತಾಲ್ಲೂಕು ನರಸಾಪುರದ ಹೋಬಳಿಗೆ ಸೇರಿದ ಮಾರ್ಜಿನ್ನಲ್ಲಿ ನಮೂದಾಗಿ ಇರತಕ್ಕ ಇನಾಂ ಗ್ರಾಮಗಳು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಮಾರ್ಚಿ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ಬಳ್ಳೂರು ಗ್ರಾಮ
2. ಖಾಯಂಗುತ್ತಾ ಬೈರಸಂದ್ರ ಗ್ರಾಮ

(ಹೆಚ್ಚು ತಪಶೀಲ್ ಬಗ್ಯೆ 1904ನೆ ಫೆಬ್ರವರಿ 4ನೆ ಮತ್ತು 5ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 65—64ನೆ ನಂಬರ್ ಪೇಜು ನೋಡತಕ್ಕದ್ದು.)